

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಉನ್ನತ ಸ್ಥಾನಮಾನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **09–03–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸ್ಥಳದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಬಲಿದಾನಗಳ ಬಗ್ಗೆ ಮತ್ತು ಅವರ ಸ್ಥಾನ, ಪದವಿಗಳ ಬಗ್ಗೆ ಹಾಗೂ ಅಲ್ಲಾಹನು ಅವರಿಗೆ ದಯಪಾಲಿಸಿದ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ತನ್ನ ಎಲ್ಲ ಸಂಪತ್ತನ್ನೂ ಸಾಮಗ್ರಿಗಳನ್ನೂ ಅಲ್ಲಾಹನ ಮಾರ್ಗದಲ್ಲಿ ನೀಡಿದ್ದರು ಮತ್ತು ಅವರು ಕಂಬಳಿಯನ್ನು ಹೊದ್ದುಕೊಂಡಿದ್ದರು. ಆದರೆ ಅಲ್ಲಾಹನು ಅವರಿಗೆ ಅದಕ್ಕೆ ಪ್ರತಿಫಲವಾಗಿ ಏನು ನೀಡಿದನು? ಅಲ್ಲಾಹನು ಅವರನ್ನು ಸಂಪೂರ್ಣ ಅರಬ್ ದೇಶದ ದೊರೆಯನ್ನಾಗಿ ಮಾಡಿದನು. ಅವರ ಕೈಗಳಿಂದ ಇಸ್ಲಾಮ್‌ಗೆ ಹೊಸದಾಗಿ ನವಜೀವನ ದೊರಕುವಂತೆ ಅಲ್ಲಾಹನು ಮಾಡಿದನು. ಧರ್ಮತ್ಯಾಗ ಮಾಡಿದ ಅರಬ್ ದೇಶವನ್ನು ಜಯಿಸುವಂತೆ ಮಾಡಿ ತೋರಿಸಿದನು. ಅಲ್ಲಾಹನು ಅವರಿಗೆ ಏನೆಲ್ಲಾ ನೀಡಿದನೋ ಅವುಗಳನ್ನು ಯಾರೂ ಊಹಿಸಲು ಸಹ ಸಾಧ್ಯವಿರಲಿಲ್ಲ.

ಒಟ್ಟಾರೆ ಹೇಳುವುದಾದರೆ ಸಹಾಬರ ಸತ್ಯಸಂಧತೆ ಮತ್ತು ನಿಷ್ಠೆ, ನಿಷ್ಕಾಪಟ್ಯ ಮತ್ತು ವಾತ್ಸಲ್ಯ ಮನೋಭಾವ ಪ್ರತಿಯೊಬ್ಬ ಮುಸ್ಲಿಮನಿಗೆ ಅತ್ಯುತ್ತಮ ಮಾದರಿಯಾಗಿದೆ. ಸಹಾಬರ ಜೀವಿತ ಎಂತಹದಾಗಿತ್ತೆಂದರೆ ಪ್ರವಾದಿಗಳ ಪೈಕಿ ಬೇರೆ ಯಾವುದೇ ಪ್ರವಾದಿಯ ಜೀವಿತದಲ್ಲಿ ಈ ಉದಾಹರಣೆ ಕಾಣಲು ಸಿಗಲಾರದು. ವಾಸ್ತವಿಕ ವಿಷಯವೇನೆಂದರೆ ಮನುಷ್ಯನು ತನ್ನ ಆಶೆಗಳನ್ನೂ ಉದ್ದೇಶಗಳನ್ನೂ ದೂರ ಸರಿಸಿ ಅಲ್ಲಾಹನ ಸನ್ನಿಧಾನಕ್ಕೆ ಆಗಮಿಸುವ ತನಕ ಏನನ್ನೂ ಗಳಿಸಲು ಸಾಧ್ಯವಾಗಲಾರದು. ಅವನು ತನಗೆಯೇ ಹಾನಿ ಉಂಟು ಮಾಡುವವನಾಗುತ್ತಾನೆ. ಆದರೆ ಮನುಷ್ಯನು ತನ್ನ ಎಲ್ಲಾ ಇಂದ್ರಿಯಾಸಕ್ತಿಗಳಿಂದ ಮತ್ತು ಉದ್ದೇಶಲಕ್ಷ್ಯಗಳಿಂದ ದೂರ ಸರಿದು ಪರಿಶುದ್ಧ ದೇಹದೊಂದಿಗೆ ಬರಿಗೈಯ್ಯಲ್ಲಿ ಅಲ್ಲಾಹನ ಸನ್ನಿಧಿಗೆ ಹೋದರೆ ಅಲ್ಲಾಹನು ಅವನಿಗೆ ಅನುಗ್ರಹ ನೀಡುತ್ತಾನೆ ಮತ್ತು ಅವನನ್ನು ಸಂರಕ್ಷಿಸುತ್ತಾನೆ. ಆದರೆ ಶರತ್ತೇನೆಂದರೆ ಮನುಷ್ಯನು ಜೀವಾರ್ಪಣೆ ಮಾಡಲು ಸಿದ್ಧನಾಗಬೇಕು. ಅಲ್ಲಾಹನ ಮಾರ್ಗದಲ್ಲಿ ಅಪಮಾನ ಮತ್ತು ಮೃತ್ಯುವಿಗೆ ಸ್ವಾಗತ ಕೋರುವವನಾಗಬೇಕು. ನೋಡಿರಿ, ಲೋಕವು ಒಂದು ನಶ್ವರ ವಸ್ತುವಾಗಿದೆ. ಅದರಲ್ಲಿ ಯಾರೂ ಸ್ಥಿರವಾಗಿ ಇರುವುದಿಲ್ಲ. ಆದರೆ ಯಾರು ಅಲ್ಲಾಹನಿಗೋಸ್ಕರ ಲೋಕವನ್ನು ಬಿಟ್ಟುಬಿಡುತ್ತಾರೋ ಅವರಿಗೆ ಅದರ ರಸಾನುಭೂತಿ ಸಹ ದೊರಕುತ್ತದೆ. ಇದೇ ಕಾರಣದಿಂದ, ಯಾವ ವ್ಯಕ್ತಿ ಅಲ್ಲಾಹನ ಸಾಮೀಪ್ಯ ಗಳಿಸುತ್ತಾನೋ ಲೋಕದಲ್ಲಿ ಅವನ ಘನತೆ ಹರಡುವಂತೆ ಅಲ್ಲಾಹನು ಮಾಡುತ್ತಾನೆ. ಲೌಕಿಕ ಮನೋಭಾವದ ಜನರು ತಮ್ಮ ಘನತೆ ವರ್ಧಿಸಲು ಸಾವಿರಾರು ಪ್ರಯತ್ನ ಮಾಡುತ್ತಾರೆ. ತಮಗೆ ಯಾವುದಾದರೂ ಬಿರುದು ಸಿಗಲಿ ತಮಗೆ ಆಸ್ಥಾನದಲ್ಲಿ ಗೌರವದ ಸ್ಥಾನ ದೊರಕಲಿ, ನ್ಯಾಯಾಲಯದಲ್ಲಿ ಕುಳಿತುಕೊಳ್ಳಲು ಕುರ್ಚಿ ಲಭಿಸುವವರಲ್ಲಿ ತನ್ನ ಹೆಸರು ಸೇರಲಿ ಎಂದೆಲ್ಲಾ ಆಶಿಸುತ್ತಾರೆ. ಆದರೆ ಅಲ್ಲಾಹನಿಗೋಸ್ಕರ ತ್ಯಾಗ ಮಾಡಲು ಸಿದ್ಧರಾಗುವವರಿಗೆ ಎಲ್ಲಾ ರೀತಿಗಳ ಲೌಕಿಕ ಗೌರವಗಳು ನೀಡಲ್ಪಡುತ್ತದೆ. ಪ್ರತಿಯೊಬ್ಬನು ಹೃದಯದಲ್ಲಿ ಅಂತಹ ವ್ಯಕ್ತಿ ಬಗ್ಗೆ ಗೌರವ ಭಾವನೆ ಹೊಂದುವಂತೆ ಅಲ್ಲಾಹನು ಮಾಡುತ್ತಾನೆ. ತ್ಯಾಗ ಮಾಡಲು ಸಿದ್ಧರಾಗುವವರು ತ್ಯಾಗ ಮಾಡುತ್ತಾರೆ. ಅಲ್ಲಾಹನಿಗೋಸ್ಕರ ಕಳೆದುಕೊಳ್ಳುವವರಿಗೆ ಅಲ್ಲಾಹನು ಎಲ್ಲವನ್ನೂ ಕೊಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಲೌಕಿಕ ಸರಕಾರಗಳಿಗೋಸ್ಕರ ಸ್ವಲ್ಪ ಮಾತ್ರ ಏನಾದರೂ ಕಳೆದುಕೊಂಡರೆ ಅವನಿಗೆ ಸರಕಾರದಿಂದ ಪ್ರತಿಫಲ ಲಭಿಸುತ್ತದೆ. ಹೀಗಿರುವಾಗ ಅಲ್ಲಾಹನಿಗೋಸ್ಕರ ಕಳೆದುಕೊಳ್ಳುವವನಿಗೆ ಪ್ರತಿಫಲ ಲಭಿಸಲಾರದೆ? ಅಲ್ಲಾಹನ ಮಾರ್ಗದಲ್ಲಿ ವೆಚ್ಚ ಮಾಡಿದುದಕ್ಕೆ ಪ್ರತಿಯಾಗಿ ಅನೇಕ ಪಟ್ಟು ದೊರಕುವ ತನಕ ಅವನು ಮೃತನಾಗಲಾರನು. ಅಲ್ಲಾಹನು ಯಾರ ಸಾಲವನ್ನೂ ಮರುಪಾವತಿ ಮಾಡದೇ ಇಟ್ಟುಕೊಳ್ಳುವುದಿಲ್ಲ. ಆದರೆ ಈ ವಿಷಯಗಳನ್ನು ನಂಬುವವರು ಮತ್ತು ಅವುಗಳ ವಾಸ್ತವಿಕತೆಯನ್ನು ಅರಿತುಕೊಳ್ಳುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಸತ್ಯಸಂಧತೆ, ನಿಷ್ಠೆ, ನಿಷ್ಕಾಪಟ್ಯ ಮತ್ತು ವಾತ್ಸಲ್ಯ ತೋರಿಸಿದವರ ಉದಾಹರಣೆಗಳು ನಮಗೆ ಎಷ್ಟು ಭವ್ಯವಾಗಿ ಕಾಣಿಸುತ್ತವೆ ಎಂದರೆ ನಾವು ಆಶ್ಚರ್ಯ ಚಕಿತರಾಗುತ್ತೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧತೆ ಸಹಾಬರ ಪ್ರೀತಿಗಳ ದಿಕ್ಕನ್ನು ಬದಲಾಯಿಸಿತಲ್ಲದೆ ಪ್ರೀತಿಯ ಪ್ರಮಾಣವನ್ನು ಎಷ್ಟು ವರ್ಧಿಸಿತೆಂದರೆ ಅದಕ್ಕೆ ಸಮಾನವಾದ ಉದಾಹರಣೆ ಲೋಕದಲ್ಲಿ ಅದರ ಮೊದಲು ಕಾಣಲು ಸಿಗುವುದಿಲ್ಲ. ಸಹಾಬರು ತಮ್ಮ ಎಲ್ಲಾ ಇಂದ್ರಿಯಾಸಕ್ತಿಗಳಿಂದ ಮುಕ್ತರಾಗಿ ಪರಿಶುದ್ಧರಾಗಿದ್ದರು. ಪರಿಶುದ್ಧ ಹೃದಯವುಳ್ಳವರಾಗಿ ಅಲ್ಲಾಹನಿಗೆ ಮಾತ್ರ ನಿಷ್ಠರಾಗಿ ಕೇವಲ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಜೀವಿಸುವವರಾಗಿದ್ದರು. ಇಂತಹ ಸ್ಥಿತಿವುಂಟಾದಾಗ ಅಲ್ಲಾಹನು ಅನುಗ್ರಹ ನೀಡುತ್ತಾನೆ. ಅಪರಿಮಿತವಾಗಿ ಅನುಗ್ರಹ ನೀಡುತ್ತಾನೆ. ನಾವು ಸಹಾಬರ ಜೀವಿತದಲ್ಲಿ ಈ ವಿಷಯಗಳನ್ನು ಕಾಣುತ್ತೇವೆ.

ಸಹಾಬರು ತಮ್ಮ ಜೀವವನ್ನು ಅಲ್ಲಾಹನಿಗೆ ಹೇಗೆ ಅಧೀನ ಪಡಿಸಿದರು ಮತ್ತು ಅವರು ಎಂತಹ ಉದಾಹರಣೆ ಪ್ರಕಟಿಸಿದರು ಎಂಬುದಕ್ಕೆ ಸಂಬಂಧಿಸಿ ಕೆಲವು ಘಟನೆಗಳನ್ನು

ವಿವರಿಸುವೆನು. ಹಝ್ರತ್ ಉಬಾದ್ ಬಿನ್ ಬಶರ್ ಒಬ್ಬ ಅನ್ಸಾರಿ (ಮದೀನ ನಿವಾಸಿ) ಸಹಾಬಿಯಾಗಿದ್ದರು. ಯೌವ್ವನ ಕಾಲದಲ್ಲಿ ಎಂದರೆ ಅಂದಾಜು ಮೂವತ್ತೈದು ವರ್ಷ ಪ್ರಾಯದಲ್ಲಿ ಅವರು ಶಹೀದರಾಗಿದ್ದರು. ಅವರು ಮಾಡುತ್ತಿದ್ದ ಆರಾಧನೆ ಮತ್ತು ಪವಿತ್ರ ಖುರ್‌ಆನಿನ ತಿಲಾವತ್ ಬಗ್ಗೆ ಒಂದು ಘಟನೆಯನ್ನು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೀಗೆ ವಿವರಿಸುತ್ತಾರೆ: ಒಂದು ರಾತ್ರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಹಜ್ಜುದ್ ನಮಾಝ್‌ನ ಸಮಯದಲ್ಲಿ ಎಚ್ಚರಗೊಂಡಾಗ ಮಸ್‌ಜಿದ್‌ನಿಂದ ಪವಿತ್ರ ಖುರ್‌ಆನ್ ತಿಲಾವತ್ ಮಾಡುವ ಶಬ್ದ ಕೇಳಿಸುತ್ತಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ಏನು ಇದು ಉಬಾದರ ಶಬ್ದವೇ? ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು: ಅದು ಅವರದೇ ಶಬ್ದ ಎಂದು ಭಾಸವಾಗುತ್ತಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು. ಓ ಅಲ್ಲಾಹ್ ಉಬಾದನ ಮೇಲೆ ದಯೆದೋರು. ಪವಿತ್ರ ಖುರ್‌ಆನ್ ಪಠಿಸುತ್ತಾ ತಮ್ಮ ರಾತ್ರಿಗಳನ್ನು ಕಳೆದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಾರ್ಥನೆಯನ್ನು ನೇರವಾಗಿ ಗಳಿಸಿದವರಾದ ಆ ಜನರು ಎಷ್ಟು ಭಾಗ್ಯಶಾಲಿಗಳು. ಹಝ್ರತ್ ಉಬಾದರಿಗೆ ತಾನು ಕಂಡ ಒಂದು ಸ್ವಪ್ನದ ಪ್ರಕಾರ ತನಗೆ ಶಹಾದತ್ ಪದವಿ ಲಭಿಸುವುದೆಂದು ದೃಢ ನಂಬಿಕೆ ಇತ್ತು. ಯಮಾಮ ಯುದ್ಧದಲ್ಲಿ ಅವರ ಈ ಸ್ವಪ್ನ ಈಡೇರಿತು. ಬಹಳ ಶೌರ್ಯದಿಂದ ಹೋರಾಡುತ್ತಾ ಅವರು ಶಹೀದ್ ಆದರು.

ಚರಿತ್ರೆ ಹರಾಮ್ ಬಿನ್ ಮಲ್‌ಹಾನ್ ಎಂಬ ಒಬ್ಬ ಸಹಾಬಿಯ ಬಗ್ಗೆ ನಮಗೆ ತಿಳಿಸುತ್ತದೆ. ಅವರು ಜನರಿಗೆ ಪವಿತ್ರ ಖುರ್‌ಆನನ್ನು ಕಲಿಸುತ್ತಿದ್ದರು. ಬಡವರಿಗೆ ಮತ್ತು ಅಸ್‌ಹಾಬುಸ್ಸುಫ್ಫರಿಗೆ ಸೇವೆ ಮಾಡುವುದರಲ್ಲಿ ಮುಂದಾಗಿದ್ದರು. ಬನೀ ಆಮಿರ್ ಗೋತ್ರದ ಒಂದು ಪ್ರತಿನಿಧಿ ಸಂಘ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ, ನಮ್ಮ ಗೋತ್ರದವರಿಗೆ ತಬ್ಲೀಗ್ ಮಾಡಲು ಜನರನ್ನು ಕಳುಹಿಸಿರಿ ಎಂದು ಅಪೇಕ್ಷಿಸಿದರು. ಇಸ್ಲಾಮ್ ಬಗ್ಗೆ ಮನವರಿಕೆ ಮಾಡಿ ನಮ್ಮ ಜನರು ಇಸ್ಲಾಮ್ ಧರ್ಮವನ್ನು ಪ್ರವೇಶಿಸುವಂತಾಗಲಿ ಎಂದು ಕೇಳಿಕೊಂಡರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹರಾಮ್ ಬಿನ್ ಮಲ್‌ಹಾನರನ್ನು ಅಮೀರರನ್ನಾಗಿ ಮಾಡಿ ಒಂದು ಪ್ರತಿನಿಧಿ ಸಂಘವನ್ನು ಬನೀ ಆಮಿರ್ ಗೋತ್ರದವರ ಕಡೆಗೆ ಕಳುಹಿಸಿದರು. ಈ ಜನರು ಆ ಗೋತ್ರದವರ ಬಳಿ ತಲಪಿದಾಗ ಹಝ್ರತ್ ಹರಾಮ್ ಬಿನ್ ಮಲ್‌ಹಾನರಿಗೆ ಬನೀ ಆಮಿರ್ ಗೋತ್ರದವರ ಬಗ್ಗೆ ಸಂಶಯವುಂಟಾಯಿತು. ಖಂಡಿತವಾಗಿ ಏನೋ ಕೆಡುಕು ಸಂಭವಿಸಲಿದೆ ಎಂದು. ಬನೀ ಆಮಿರ್ ಗೋತ್ರದವರ ಸಂಕಲ್ಪ ಸರಿಯಿಲ್ಲ ಎಂದು ಅವರಿಗೆ ತೋಚಿತು. ಅವರು ಹೇಳಿದರು, ನಾವು ಜಾಗರೂಕತೆಯಿಂದ ವರ್ತಿಸಬೇಕು. ಎಲ್ಲರೂ ಒಟ್ಟಿಗೆ ಅಲ್ಲಿಗೆ ಹೋಗಬಾರದು. ನೀವು ಇಲ್ಲೇ ಇರಿ. ನಾನು ಮತ್ತು ಇನ್ನೊಬ್ಬ ಅವರ ಬಳಿಗೆ ಹೋಗುವೆವು. ಗೋತ್ರದ ಜನರು ನಮ್ಮೊಂದಿಗೆ ಸರಿಯಾದ ರೀತಿಯಲ್ಲಿ ವರ್ತಿಸಿದರೆ ನೀವು ಸಹ ಬನ್ನಿರಿ. ಅವರು ನಮಗೆ ಹಾನಿಯುಂಟು ಮಾಡಿದರೆ ನೀವು ಪರಿಸ್ಥಿತಿಗೆ ಅನುಸಾರವಾಗಿ ನಿರ್ಧಾರ ಕೈಗೊಳ್ಳಿರಿ ಎಂದು ಹೇಳಿದರು.

ಹರಾಮ್ ಬಿನ್ ಮಲ್‌ಹಾನ್ ಮತ್ತು ಅವರ ಸಂಗಡಿಗ ಬನೀ ಆಮಿರ್ ಗೋತ್ರದವರ ಬಳಿಗೆ ತಲಪಿದಾಗ ಆ ಗೋತ್ರದ ನಾಯಕ ಒಬ್ಬನಿಗೆ ಸಂಜ್ಞೆ ಮಾಡಿದನು. ಅವನು ಕೂಡಲೇ ಹರಾಮ್ ಬಿನ್ ಮಲ್‌ಹಾನರನ್ನು ಈಟಿಯಿಂದ ಆಕ್ರಮಿಸಿದನು. ಅವರ ಕೊರಳಿನಿಂದ ರಕ್ತದ ಕಾರಂಜಿ ಹೊರಹೊಮ್ಮಿತು. ಅವರು ರಕ್ತವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಹೇಳಿದರು: ಕಅ್‌ಬದ ಪ್ರಭುವಿನಾಣೆ ನಾನು ಜಯಶಾಲಿಯಾದೆ. ಅವರ ಸಂಗಡಿಗನನ್ನೂ ಆಕ್ರಮಿಸಿ ಶಹೀದರನ್ನಾಗಿ ಮಾಡಲಾಯಿತು. ಅನಂತರ ಉಳಿದವರನ್ನೆಲ್ಲಾ ಶಹೀದರನ್ನಾಗಿ ಮಾಡಲಾಯಿತು. ಅವರ ಸಂಖ್ಯೆ ಎಪ್ಪತ್ತು ಆಗಿತ್ತು. ಅವರನ್ನು ದೌರ್ಜನ್ಯಕರವಾಗಿ ಮೋಸದಿಂದ ಶಹೀದರನ್ನಾಗಿ ಮಾಡುತ್ತಾ ಇದ್ದಾಗ ಅವರು ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ನಮ್ಮ ಈ ಬಲಿದಾನಗಳನ್ನು ಸ್ವೀಕರಿಸು ಮತ್ತು ನಮ್ಮ ಈ ಸ್ಥಿತಿಯ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸು. ಹಝ್ರತ್ ಜಿಬ್ರೀಲ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ಸಹಾಬರ ಸಲಾಮ್ ತಲಪಿಸಿ ಅಲ್ಲಿನ ಸ್ಥಿತಿ ಮತ್ತು ಶಹಾದತ್ ಬಗ್ಗೆ ತಿಳಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಂಗಡಿಗರಿಗೆ ಈ ವಿಷಯ ತಿಳಿಸಿದರು. ಈ ಶಹಾದತ್ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅತ್ಯಂತ ಹೆಚ್ಚು ದುಃಖವಾಗಿತ್ತು. ಅವರು ಮೂವತ್ತು ದಿವಸಗಳ ಕಾಲ ಪ್ರಾರ್ಥಿಸಿದರು– ಓ ಅಲ್ಲಾಹ್, ದೌರ್ಜನ್ಯ ಮಾಡಿದ ಈ ಜನರನ್ನು ನೀನೇ ಹಿಡಿಗೂಡು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಶಹಾದತ್‌ಗಳನ್ನು ಬೃಹತ್ತಾದ ಶಹಾದತ್ ಎಂದು ಪ್ರಕಟಿಸಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಧರ್ಮಕ್ಕೋಸ್ಕರ ತೋರಿಸುವ ಈ ಪ್ರೀತಿ ಮತ್ತು ಭವ್ಯ ಬಲಿದಾನಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ಪ್ರೀತಿ ಎಂತಹ ವಸ್ತುವೆಂದರೆ ಅದು ಎಲ್ಲವನ್ನೂ ಮಾಡಿಸುತ್ತದೆ. ಒಬ್ಬನು ಯಾರನ್ನಾದರೂ ಪ್ರೀತಿಸುವುದಾದರೆ ಅವನು ತನ್ನ ಪ್ರೀತಿಗೆ ಪಾತ್ರರಾದ ವ್ಯಕ್ತಿಗೋಸ್ಕರ ಏನು ಬೇಕಾದರೂ ಮಾಡಲು ಸಿದ್ಧನಾಗುತ್ತಾನೆ. ಸಹಾಬ ರಿಝ್ವಾನುಲ್ಲಾಹ್ ಅಲೈಹಿಮ್ ಅಜ್‌ಮಈನ್‌ರ ಸ್ಥಿತಿಯನ್ನು ನೋಡಿರಿ. ಮಕ್ಕದಲ್ಲಿ ಅವರಿಗೆ ಎಷ್ಟೆಷ್ಟು ಕಷ್ಟಗಳು ನೀಡಲ್ಪಟ್ಟವು. ವಿವಿಧ ರೀತಿಗಳ ಹಿಂಸಾಚಾರಗಳಿಗೆ ಅವರು ಪಾತ್ರರಾದರು. ಪುರುಷರಿಗೆ ಮಾತ್ರವಲ್ಲ ಕೆಲವು ಮುಸ್ಲಿಮ್ ಮಹಿಳೆಯರಿಗೆ ಸಹ ಎಷ್ಟು ತೀವ್ರವಾಗಿ ಹಿಂಸೆ ನೀಡಲಾಯಿತೆಂದರೆ ಅದರ ಬಗ್ಗೆ ಯೋಚಿಸುವಾಗ ಶರೀರ ನಡುಕ ಅನುಭವಿಸುತ್ತದೆ. ಆ ಸಹಾಬರು ಮಕ್ಕದ ಅವಿಶ್ವಾಸಿಗಳೊಂದಿಗೆ ಸೇರುತ್ತಿದ್ದರೆ ಅವರು ಗೌರವಿಸಲ್ಪಡುತ್ತಿದ್ದರು. ಏಕೆಂದರೆ ಸಹಾಬರು ಮಕ್ಕದ ಜನರ ಸಂಬಂಧಿಕರೇ ಆಗಿದ್ದರು. ಆದರೆ ಆ ಕಷ್ಟ ಮತ್ತು ದೌರ್ಜನ್ಯದ ಬಿರುಗಾಳಿಯಲ್ಲಿಯೂ ಆ ಸಹಾಬರನ್ನು ಸತ್ಯದಲ್ಲಿ

ನೆಲೆಗೊಳ್ಳುವಂತೆ ಮಾಡಿದುದು ಯಾವುದು? ಅದು ಸತ್ಯವನ್ನು ಪ್ರೀತಿಸಿದ ಕಾರಣದಿಂದ ಅವರ ಹೃದಯದಿಂದ ಹೊರಹೊಮ್ಮಿದ ರಸಾನುಭೂತಿಯ ಕಾರಂಜಿಯಾಗಿತ್ತು. ಅಲ್ಲಾಹನಿಂದ ಲಭಿಸುವ ಈ ರಸಾನುಭೂತಿಯ ನಂತರ ಅವರು ಒಂದು ಕ್ರಿಮಿಕೀಟದ ಹಾಗೆ ತುಳಿಯಲ್ಪಟ್ಟು ಮೃತರಾಗುತ್ತಾರೆ. ಅವರಿಗೆ ಅದು ಇಷ್ಟಕರವಾಗುತ್ತವೆ. ಆ ಸಹಾಬಿ 'ನಾನು ಕಅ್‌ಬದ ಪ್ರಭುವನ್ನು ಗಳಿಸಿದೆನು' ಎಂದು ಹೇಳಿದ ಹಾಗೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಿಶ್ವಾಸಿಗೆ ಅತ್ಯಂತ ಕಠಿಣ ಕಷ್ಟಗಳು ಸಹ ಸಹಿಸಲು ಸುಲಭವಾಗಿರುತ್ತವೆ. ಸತ್ಯವೇನೆಂದರೆ, ಕೊಲ್ಲಲ್ಪಡಲು ಸಿದ್ಧನಾಗಿರುವುದೇ ಸತ್ಯವಿಶ್ವಾಸಿಯ ಚಿಹ್ನೆಯಾಗಿದೆ. ಇದೇ ರೀತಿ ಒಬ್ಬ ಮುಸ್ಲಿಮನೊಂದಿಗೆ ನೀನು ಕ್ರೈಸ್ತನಾಗದಿದ್ದರೆ ಕೊಲ್ಲಲ್ಪಡುವೆ ಎಂದು ಹೇಳಿದಾಗ ಅವನ ಆತ್ಮದಿಂದ ಯಾವ ಧ್ವನಿ ಬರುತ್ತದೆ ಎಂದು ನೋಡಬೇಕಾಗಿದೆ. ಅವನು ಮೃತನಾಗಲು ತಯಾರಾಗುತ್ತಾನೋ ಅಥವಾ ಕ್ರೈಸ್ತನಾಗಲು ಆದ್ಯತೆ ನೀಡುತ್ತಾನೋ ಎಂದು ನೋಡಬೇಕಾಗಿದೆ. ಅವನು ಮೃತನಾಗಲು ಆದ್ಯತೆ ನೀಡುವುದಾದರೆ ಅವನು ವಾಸ್ತವಿಕ ಸತ್ಯವಿಶ್ವಾಸಿಯಾಗಿದ್ದಾನೆ. ಅದಕ್ಕೆ ಆದ್ಯತೆ ನೀಡುವುದಿಲ್ಲವಾದರೆ ಅವನು ಅವಿಶ್ವಾಸಿ ಆಗಿದ್ದಾನೆ. ಸತ್ಯವಿಶ್ವಾಸಿಗಳ ಮೇಲೆ ಬಂದೆರಗುವ ವಿಪತ್ತುಗಳಲ್ಲಿ ಒಳಗಿಂದೊಳಗೆ ಒಂದು ರಸಾನುಭೂತಿ ಇರುತ್ತದೆ. ಯೋಚಿಸಿರಿ, ಈ ವಿಪತ್ತುಗಳಲ್ಲಿ ರಸಾನುಭೂತಿ ಇಲ್ಲದಿರುತ್ತಿದ್ದರೆ ಪ್ರವಾದಿಗಳು ಈ ವಿಪತ್ತುಗಳ ದೀರ್ಘವಾದ ಶೃಂಖಲೆಯನ್ನು ದಾಟಿ ಹೋಗಲು ಹೇಗೆ ಸಾಧ್ಯವಾಯಿತು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿಯು ಸಹಾಬರಲ್ಲಿ ಎಂತಹ ಆತ್ಮವನ್ನು ಊದಿತೆಂದರೆ ಅವರು ಮೃತರಾಗುವಾಗ ಸಹ ಹೇಳುತ್ತಿದ್ದರು: ಕಅ್‌ಬದ ಪ್ರಭುವಿನಾಣೆ ನಾವು ಜಯಶಾಲಿಗಳಾದೆವು, ನಾವು ಅಲ್ಲಾಹನ ಸಾನ್ನಿಧ್ಯವನ್ನು ಪಡೆದೆವು ಎಂದು. ಆ ಜನರು ಒಳಿತುಗಳನ್ನು ಮಾಡುವವರಾಗಿದ್ದರು. ಅವರ ಮೇಲೆ ದೌರ್ಜನ್ಯ ನಡೆದಾಗ ಅವರು ಅದಕ್ಕೋಸ್ಕರ ಬಲಿದಾನ ನೀಡುವವರಾಗಿದ್ದರು. ಅವರು ಸ್ವತಃ ದೌರ್ಜನ್ಯಗಾರರಾಗುತ್ತಿರಲಿಲ್ಲ. ಇಂದಿನ ಕಾಲದ ಕೆಲವು ಗುಂಪುಗಳು ಹೇಳುವಂತೆ ನಾವು ಶಹೀದರಾದೆವು ಅಥವಾ ಶಹೀದರಾಗುವೆವು. ನಾವು ಸ್ವರ್ಗಕ್ಕೆ ಹೋಗುವೆವು ಎಂದು ಹೇಳುವಂತೆ ಅವರ ಸ್ಥಿತಿ ಇರಲಿಲ್ಲ. ಆ ಸಹಾಬರು ದೌರ್ಜನ್ಯದ ವಿರುದ್ಧ ಯುದ್ಧ ಮಾಡುವವರಾಗಿದ್ದರು. ಅವರು ದೌರ್ಜನ್ಯವನ್ನು ಹರಡುವವರಾಗಿರಲಿಲ್ಲ.

ಹಝ್ರತ್ ಅಬ್ದುಲ್ಲಾ ಬಿನ್ ಅಮರ್ ಒಬ್ಬ ಅನ್‌ಸಾರಿ ಸಹಾಬಿಯಾಗಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಅವರಿಗೆ ಒಂದು ಸ್ವಪ್ನದ ಮೂಲಕ ಅಥವಾ ದೈವಿಕ ಸೂಚನೆ ಮೂಲಕ ದೃಢವಾಗಿತ್ತು ತಾನು ಆ ಯುದ್ಧದಲ್ಲಿ ಪ್ರಥಮ ಶಹೀದ್ ಆಗುವೆನೆಂದು. ಹಾಗೆಯೇ ಸಂಭವಿಸಿತು. ಹಝ್ರತ್ ಅಬ್ದುಲ್ಲಾರವರ ಶಹಾದತ್ ಮತ್ತು ಬಲಿದಾನವನ್ನು ಅಲ್ಲಾಹನು ಹೇಗೆ ಅನುಗ್ರಹಿಸಿದನು ಎಂಬುದರ ಬಗ್ಗೆ ಒಂದು ವರದಿ ಈ ರೀತಿಯಿದೆ: ಅಬ್ದುಲ್ಲಾರವರ ಪುತ್ರ ದುಃಖಿಸುವುದನ್ನು ಕಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಶಹಾದತ್ ನಂತರ ನಿನ್ನ ತಂದೆಯವರನ್ನು ಅಲ್ಲಾಹನು ತನ್ನ ಮುಂದೆ ಕುಳ್ಳಿರಿಸಿ ಹೇಳಿದನು ನೀನು ಇಚ್ಛಿಸುವುದನ್ನು ನನ್ನಿಂದ ಕೇಳು. ನಾನು ಕೊಡುವೆನು. ಅಬ್ದುಲ್ಲಾ ಹೇಳಿದರು: ಓ ನನ್ನ ಪ್ರಭು ನಾನು ನಿನ್ನ ದಾಸನೆಂಬ ನನ್ನ ಕರ್ತವ್ಯಗಳನ್ನು ಈಡೇರಿಸಿಲ್ಲ. ನಾನು ನಿನ್ನ ಮುಂದೆ ನನ್ನ ಇಚ್ಛೆಯನ್ನು ಹೇಗೆ ಪ್ರಕಟಿಸಲಿ. ನೀನು ನಿನ್ನ ಅನುಗ್ರಹದಿಂದ ನನಗೆ ನೀಡು. ಅನಂತರ ಅಬ್ದುಲ್ಲಾ ಹೇಳಿದರು: ಓ ಅಲ್ಲಾಹ್ ನೀನು ನನ್ನ ಇಚ್ಛೆ ಏನೆಂದು ಕೇಳುವುದಾದರೆ ನಾನು ಹೇಳುತ್ತೇನೆ– ನೀನು ನನ್ನನ್ನು ಮತ್ತೊಮ್ಮೆ ಭೂಲೋಕಕ್ಕೆ ಮರಳುವಂತೆ ಮಾಡು. ನಾನು ನಿನ್ನ ಪ್ರವಾದಿಯವರ ಜೊತೆಗೂಡಿ ಶತ್ರುಗಳ ವಿರುದ್ಧ ಹೋರಾಡಿ ಪುನಃ ಶಹೀದ್ ಆಗಿ ಆಗಮಿಸುವಂತೆ ಮಾಡು ಎಂದು ಹೇಳಿದರು. ಆಗ ಅಲ್ಲಾಹನು ಹೇಳಿದನು: ಒಬ್ಬನು ಮೃತನಾದರೆ ಅವನನ್ನು ಲೋಕಕ್ಕೆ ಪುನಃ ಮರಳಿ ಕಳುಹಿಸಲಾಗುವುದಿಲ್ಲ ಎಂಬುದು ನನ್ನ ತೀರ್ಮಾನವಾಗಿದೆ. ಆದುದರಿಂದ ನಿನ್ನ ಆ ಇಚ್ಛೆ ಈಡೇರಲಾರದು.

ಹಝ್ರತ್ ಅಮರ್ ಬಿನ್ ಜಮೂಹ್‌ರವರಿಗೆ ಬಲಿದಾನ ಮತ್ತು ಶಹಾದತ್ ಬಗ್ಗೆ ಇದ್ದ ಉತ್ಸಾಹದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ. ಅವರು ಕಾಲು ನೋವಿನಿಂದ ಬಳಲುತ್ತಿದ್ದ ಕಾರಣ ಬದರ್ ಯುದ್ಧದಲ್ಲಿ ಭಾಗವಹಿಸಲು ಅವರನ್ನು ಅವರ ಮಕ್ಕಳು ಬಿಡಲಿಲ್ಲ. ಉಹುದ್ ಯುದ್ಧದ ಸಂದರ್ಭದಲ್ಲಿ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನನ್ನ ಕಾಲಿನ ನೋವಿನ ಕಾರಣ ನನ್ನ ಮಕ್ಕಳು ನನ್ನನ್ನು ಯುದ್ಧದಲ್ಲಿ ಭಾಗವಹಿಸಲು ಬಿಡುವುದಿಲ್ಲ. ಆದರೆ ನಾನು ತಮ್ಮೊಂದಿಗೆ ಈ ಯುದ್ಧದಲ್ಲಿ ಭಾಗವಹಿಸುವೆನು. ಅಲ್ಲಾಹನಾಣೆ ನಾನು ಶಹೀದ್ ಆಗುವೆನೆಂದು ನಾನು ಪ್ರತೀಕ್ಷಿಸುತ್ತೇನೆ. ನನ್ನ ಕುಂಟುಕಾಲಿನ ಕಾರಣದಿಂದ ನಾನು ಸ್ವರ್ಗವನ್ನು ಪ್ರವೇಶಿಸುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ನಿಮ್ಮ ಇಚ್ಛೆ ಪ್ರಕಾರ ಯುದ್ಧದಲ್ಲಿ ಭಾಗವಹಿಸಿರಿ. ಹಾಗೆ ಹಝ್ರತ್ ಅಮರ್ ಯುದ್ಧದಲ್ಲಿ ಭಾಗವಹಿಸಿ ಶಹೀದರಾದರು.

ಸಹಾಬರು ಸತ್ಯವಿಶ್ವಾಸದಲ್ಲಿ ಮತ್ತು ದೃಢವಿಶ್ವಾಸದಲ್ಲಿ ವರ್ಧನೆ ಗಳಿಸಿದವರಾಗಿದ್ದರು. ನೀವು ಯಾವುದೇ ಸಹಾಬಿಗೆ ಸಂಬಂಧಿಸಿದ ಘಟನೆಯನ್ನು ನೋಡಿರಿ. ಅವರು ನಿಷ್ಕಾಪಟ್ಯ ಮತ್ತು ನಿಷ್ಠೆ ಹೊಂದಿದವರೂ ಅಲ್ಲಾಹನಿಗೋಸ್ಕರ ಜೀವವನ್ನು ಬಲಿಯರ್ಪಿಸಲು ಪ್ರತಿ ಸಮಯ ಸಿದ್ಧರಾಗಿರುವವರೂ ಆಗಿದ್ದರು. ಹಝ್ರತ್ ಅಬೂ ತಲ್‌ಹ ಅನ್‌ಸಾರಿ ಉಹುದ್ ಯುದ್ಧದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಗುರಾಣಿ ಹಾಗೆ ನಿಲ್ಲಲು ಭಾಗ್ಯಗಳಿಸಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ತಿಳಿಸಿದುದು ಖಂಡಿತವಾಗಿಯೂ ಸಂಭವಿಸುತ್ತದೆ. ಅದರ ಮುಂದೆ ಸಾಮಗ್ರಿಗಳು ಏನೂ ಅಲ್ಲ. ಅಲ್ಲಾಹನು ಹೇಳುತ್ತಾನೆ: ನನ್ನ ಮಾರ್ಗದಲ್ಲಿ ನೀವು ಸಂಚರಿಸುವಿರಾದರೆ **ಮುರಾಗಮನ್ ಕಸೀರ** ಧಾರಾಳ

ಅಭಯಸ್ಥಾನಗಳನ್ನು ಗಳಿಸುವಿರಿ ಎಂದು. ಶುದ್ಧ ಸಂಕಲ್ಪದಿಂದ ಯಾರಾದರೂ ಹೆಜ್ಜೆ ಹಾಕುವುದಾದರೆ ಅಲ್ಲಾಹನು ಅವನ ಜೊತೆಗಿರುತ್ತಾನೆ. ಮನುಷ್ಯನು ರೋಗಗ್ರಸ್ತನಾದರೆ ಅಲ್ಲಾಹನು ಅವನ ರೋಗ ನಿವಾರಿಸುತ್ತಾನೆ. ನೀವು ಸಹಾಬರ ಮಾದರಿಗಳನ್ನು ನೋಡಿರಿ. ಸಹಾಬರ ಉದಾಹರಣೆಗಳು ಸಕಲ ಪ್ರವಾದಿಗಳ ಉದಾಹರಣೆಗಳಾಗಿವೆ. ಅಲ್ಲಾಹನು ಇಷ್ಟಪಡುವುದು ಕರ್ಮಗಳನ್ನಾಗಿವೆ. ಸಹಾಬರು ಕುರಿಗಳ ಹಾಗೆ ತಮ್ಮ ಜೀವ ಬಲಿದಾನವಾಗಿ ನೀಡಿದರು. ಹಝ್ರತ್ ಈಸಾ ಅಲೈಹಿಸ್ಸಲಾಮರ ಸತ್ಯತೆ ಬಗ್ಗೆ ಅವರ ಶಿಷ್ಯರಿಗೆ ಸಂಶಯವಿತ್ತು ಎಂದು ಪವಿತ್ರ ಖುರ್‌ಆನ್‌ನಿಂದ ತಿಳಿದು ಬರುತ್ತದೆ. ಆ ಕಾರಣದಿಂದಲೇ ಅವರು **ಮಾಯಿದ**ವನ್ನು ಅಪೇಕ್ಷಿಸಿದರು. ಅವರು ಹೇಳಿದರು: **ವನಅ್‌ಲಮ ಅನ್ ಖದ್ ಸದಖ್‌ತನಾ** ಆ ಮೂಲಕ ನೀವು ಸತ್ಯವಂತರೋ ಸುಳ್ಳುಗಾರರೋ ಎಂದು ಸಾಬೀತಾಗಲಿ ಎಂದು. ಇದರಿಂದ ತಿಳಿಯುವುದೇನೆಂದರೆ ಮಾಯಿದ ಇಳಿದು ಬರುವ ಮೊದಲು ಅವರ ಸ್ಥಿತಿ **ನಅ್‌ಲಮ್** (ನಾವು ತಿಳಿದಿದ್ದೇವೆ) ಎಂಬಂತೆ ಇರಲಿಲ್ಲ. ಆದರೆ ಸಹಾಬರು ಅನುಭವಿಸಿದ ಅವಿಶ್ರಾಂತ ಸ್ಥಿತಿಯ ಉದಾಹರಣೆ ಬೇರೆಲ್ಲೂ ಇಲ್ಲ. ಸಹಾಬರ ಗುಂಪು ಆಶ್ಚರ್ಯಕರ ಗುಂಪಾಗಿತ್ತು. ಅವರು ಅನುಸರಿಸಲ್ಪಡಲು ಯೋಗ್ಯರಾಗಿದ್ದರು. ಅವರ ಹೃದಯ ದೃಢವಿಶ್ವಾಸ ಭರಿತವಾಗಿತ್ತು. ದೃಢ ವಿಶ್ವಾಸ ಉಂಟಾದಾಗ ಮೊದಲು ಸಂಪತ್ತು ತ್ಯಾಗ ಮಾಡಲು ಇಷ್ಟವುಂಟಾಗುತ್ತದೆ. ಅನಂತರ ಕ್ರಮೇಣ ವಿಶ್ವಾಸ ಇನ್ನಷ್ಟು ದೃಢವಾಗುವಾಗ ದೃಢವಿಶ್ವಾಸಿ ಅಲ್ಲಾಹನಿಗೋಸ್ಕರ ಜೀವ ನೀಡಲು ಸಿದ್ಧನಾಗುತ್ತಾನೆ. ಈ ದೃಢವಿಶ್ವಾಸ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿಯ ಕಾರಣ ವರ್ಧಿಸುತ್ತಾ ಇತ್ತು.

ಸಹಾಬರ ದೈನಂದಿನ ವರ್ತನೆಯಲ್ಲೂ ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗಿದ್ದ ಪ್ರೇಮದ ಅದ್ಭುತ ದೃಶ್ಯಗಳು ಕಾಣಿಸುತ್ತವೆ. ತಮಗೆ ಪ್ರೇಮವನ್ನು ಪ್ರಕಟಿಸುವ ಸಂದರ್ಭ ಸಿಗಲಿ ಎಂದು ಅವರು ಪ್ರಯತ್ನಿಸುತ್ತಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಅಮರ್ ಬಗ್ಗೆ ಹೀಗೆ ವರದಿಯಾಗಿದೆ: ಸಾಮಾನ್ಯ ಪರಿಸ್ಥಿತಿಗಳಲ್ಲಿಯೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ತನಗಿರುವ ಪ್ರೇಮವನ್ನು ಪ್ರಕಟಿಸುವುದು ಹೇಗೆ ಎಂಬ ಚಿಂತೆಯಲ್ಲಿ ಅವರಿರುತ್ತಿದ್ದರು.

ಪ್ರಾರಂಭದಲ್ಲಿ ಸಹಾಬರಿಗೆ ತಮ್ಮ ನಿಕಟ ಸಂಬಂಧಿಕರಿಗೆ ಸಹ ತಬ್ಲೀಗ್ ಮಾಡಲು ಕಷ್ಟವಾಗುತ್ತಿತ್ತು. ಪುತ್ರ ಮುಸ್ಲಿಮನಾಗಿ ತಂದೆ ಮುಸ್ಲಿಮನಾಗಿರದಿದ್ದರೆ ಕಷ್ಟಗಳು ಸಂಭವಿಸುತ್ತಿದ್ದುವು. ಬಲಹೀನನಾದವನು ಮುಸ್ಲಿಮನಾದರೆ ಅವನ ಶಕ್ತಿಶಾಲಿ ಸಂಬಂಧಿಕರು ಕಷ್ಟ ನೀಡುತ್ತಿದ್ದರು. ಹಝ್ರತ್ ಅಮರ್ ಬಿನ್ ಜಮೂಹರ ಪುತ್ರ ಅವರಿಗಿಂತ ಮೊದಲು ಮುಸ್ಲಿಮನಾಗಿದ್ದರು. ಅವರು ಪ್ರತಿದಿನ ರಾತ್ರಿ ತನ್ನ ತಂದೆ ಪೂಜಿಸುತ್ತಿದ್ದ ವಿಗ್ರಹವನ್ನು ಎತ್ತಿ ಕಸದ ರಾಶಿಗೆ ಎಸೆಯುತ್ತಿದ್ದರು. ಆಗ ಅವರ ಪಿತ ಬಹಳ ಕೋಪಗೊಳ್ಳುತ್ತಿದ್ದರು. ಆದರೆ ಕೊನೆಗೆ ಅವರು ಬೇಸತ್ತು ಹೇಳಿದರು: ನಾನು ಪೂಜಿಸುತ್ತಿರುವ ಈ ದೇವ ಮೂರ್ತಿ ಸ್ವತಃ ತನ್ನನ್ನು ರಕ್ಷಿಸಿಕೊಳ್ಳಲಾರನಾದರೆ ನನ್ನನ್ನು ಹೇಗೆ ತಾನೆ ರಕ್ಷಿಸುವನು. ಅನಂತರ ಅವರು ಮುಸ್ಲಿಮರಾದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತನ್ನ ಸಹಾಬರೊಂದಿಗೆ ಅಪಾರ ಪ್ರೀತಿ ಇತ್ತು. ಅವರ ಪರಿಶುದ್ಧ ಶಕ್ತಿಯ ಮೂಲಕ ಸಹಾಬರಿಗೆ ಅಲ್ಲಾಹನ ಸಾಮೀಪ್ಯ ಲಭಿಸಿತ್ತು. ಅಲ್ಲಾಹನು ಕೆಲವು ಸಾರಿ ನೇರವಾಗಿ ಅಥವಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಅವರಿಗೆ ಅನುಗ್ರಹ ನೀಡುತ್ತಿದ್ದನು.

ಹಝ್ರತ್ ಅಬೀ ಬಿನ್ ಕಅಬ್ ಅಲ್ಲಾಹನೊಂದಿಗೆ ಹೊಂದಿದ್ದ ಸಂಬಂಧಕ್ಕೆ ಸಂಬಂಧಿಸಿ ಒಂದು ಘಟನೆ ಬುಖಾರಿ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನು ನನಗೆ ಆಜ್ಞಾಪಿಸಿದ್ದಾನೆ. ನಾನು ನಿಮಗೆ ಪವಿತ್ರ ಖುರ್‌ಆನ್ ಓದಿ ಕೇಳಿಸಬೇಕೆಂದು. ಆಗ ಹಝ್ರತ್ ಅಬೀ ಬಿನ್ ಕಅಬ್ ಆಶ್ಚರ್ಯದಿಂದ ಕೇಳಿದರು: ಏನು ಅಲ್ಲಾಹನು ನನ್ನ ಹೆಸರು ಹೇಳಿ ನಿಮ್ಮೊಂದಿಗೆ ಹೇಳಿರುವನೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೌದು ಅಲ್ಲಾಹನು ನಿಮ್ಮ ಹೆಸರು ಹೇಳಿ ಆಜ್ಞಾಪಿಸಿರುವನು. ಆಗ ಅಬೀ ಬಿನ್ ಕಅಬ್ ಉದ್ವೇಗಭರಿತರಾಗಿ ಅಳಲು ಪ್ರಾರಂಭಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ **ಲಮ್ ಯುಕುನಿಲ್ಲದೀನ ಕಫರೂ** ಎಂದು ಪ್ರಾರಂಭವಾಗುವ ಸೂರತ್ ಓದಿ ಕೇಳಿಸಿದರು. ಎಂದರೆ ಸೂರತುಲ್ ಬಯ್ಯಿನ ಓದಿ ಹೇಳಿದರು. ಒಮ್ಮೆ ಒಬ್ಬರು ಅಬೀ ಬಿನ್ ಕಅಬರೊಂದಿಗೆ ನೀವು ಆ ಮಾತು ಕೇಳಿ ಬಹಳ ಸಂತೋಷಗೊಂಡಿರಬಹುದಲ್ಲಾ ಎಂದು ಕೇಳಿದರು. ಆಗ ಅಬೀ ಬಿನ್ ಕಅಬ್ ಹೇಳಿದರು: ಅಲ್ಲಾಹನ ಅನುಗ್ರಹಗಳನ್ನು ನೋಡಿ ನೆನಪಿಸಿ ಸಂತೋಷಪಡಬೇಕು ಎಂದು ಅಲ್ಲಾಹನೇ ಹೇಳಿರುವಾಗ ನಾನು ಏಕೆ ಸಂತೋಷ ಪಡದಿರಲು ಸಾಧ್ಯ?

ಈ ಸಹಾಬರು ಅಭಿವೃದ್ಧಿ ಗಳಿಸುತ್ತಾ ಗಳಿಸುತ್ತಾ ತಮ್ಮ ಅತ್ಯಂತ ಉನ್ನತ ಸ್ಥಾನಕ್ಕೆ ತಲಪಿದವರಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೊನೆಗೆ ಸಹಾಬರು ಏನನ್ನು ಪಡೆದರೋ ಅದನ್ನು ಲೋಕ ಎಂದೂ ಪಡೆದಿರಲಿಲ್ಲ. ಅವರು ಏನನ್ನು ನೋಡಿದ್ದರೋ ಅದನ್ನು ಮೊದಲು ಯಾರೂ ಕಂಡಿರಲಿಲ್ಲ. ಸಹಾಬರ ಕಾಲವನ್ನು ನೋಡಿದರೆ ಅವರು ಬಹಳ ಸರಳ ಸ್ವಭಾವಿಗಳು ಆಗಿದ್ದರು. ಪವಿತ್ರ ಖುರ್‌ಆನಿನ ಪ್ರಕಾಶದಿಂದ ಅವರು ಪ್ರಕಾಶ ಪಡೆದಿದ್ದರು. ಅವರು ಇಂದ್ರಿಯಾಸಕ್ತಿಯ ಕಿಲುಬಿನಿಂದ ಸಂಪೂರ್ಣವಾಗಿ ಮುಕ್ತರಾಗಿದ್ದರು. **ಖದ್ ಅಫ್‌ಲಹ ಮನ್ ಝಕ್ಕಾಹಾ** ಆತ್ಮವನ್ನು ಪರಿಶುದ್ಧವಾಗಿಸಿದವನು ಖಂಡಿತವಾಗಿಯೂ ಜಯಗಳಿಸಿದನು (91:10) ಎಂಬ ಪವಿತ್ರ ಖುರ್‌ಆನ್ ವಚನ ಖಂಡಿತವಾಗಿಯೂ ಅವರಿಗೆ ಅನ್ವಯಿಸುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಹಾಬರು ಎಷ್ಟು ಸತ್ಯಸಂಧರಾಗಿದ್ದಾರೆಂದರೆ ಅವರು ವಿಗ್ರಹಪೂಜೆ ಮತ್ತು ಸೃಷ್ಟಿ ಪೂಜೆಯಿಂದ ಮುಖ ತಿರುಗಿಸಿದರಲ್ಲದೆ ಅವರೊಳಗಿಂದ ಲೌಕಿಕ ಲಾಭದ ಅಪೇಕ್ಷೆಯೇ ಅಳಿಸಿ ಹೋಯಿತು. ಅವರು ಅಲ್ಲಾಹನನ್ನು

ನೋಡಲು ತೊಡಗಿದರು. ಅವರು ಅಲ್ಲಾಹನ ಮಾರ್ಗದಲ್ಲಿ ಎಷ್ಟು ತಲ್ಲೀನರಾಗಿದ್ದರೆಂದರೆ ಅವರಲ್ಲಿ ಪ್ರತಿಯೊಬ್ಬರೂ ಇಬ್‌ರಾಹೀಮ್ ಆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಶರೀರದ ಹಾಗಿರುವರು. ಅವರ ಸಹಾಬ ಅವರ ಅಂಗಾಂಗಗಳಾಗಿದ್ದಾರೆ.

ಅಲ್ಲಾಹನು ನಮಗೆ ಸಹಾಬರ ಸರಿಯಾದ ಸ್ಥಾನವನ್ನು ಮನವರಿಕೆ ಮಾಡುವ ಭಾಗ್ಯವನ್ನು ದಯಪಾಲಿಸಲಿ. ಅವರ ಉದಾಹರಣೆ ಪ್ರಕಾರ ಚಲಿಸಿ ನಮ್ಮ ನಿಷ್ಠೆಯನ್ನು ವರ್ಧಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 09-03-2018.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon